ಎಸ್‌ಸಿ : ಎಸ್‌ಟಿ ಕಾರ್ಪೋರೇಷನ್‌ನಿಂದ ಸಾಲ.

3363(4121) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) :— ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000 ಹಾಗೂ 2000-2001ನೇ ಸಾಲಿನಲ್ಲಿ ಎಸ್‌ಸಿ : ಎಸ್‌ಟಿ ಕಾರ್ಪೋರೇಷನ್‌ನಿಂದ ನೀಡಿದ ಸಾಲದ ಮೊತ್ತವೆಷ್ಟು ಹಾಗೂ ಎಷ್ಟು ಜನರಿಗೆ ಸಾಲ ನೀಡಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು 1999-2000ನೇ ಸಾಲಿನಲ್ಲಿ 7014 ಫಲಾನುಭವಿಗಳಿಗೆ ರೂ.1875.91 ಲಕ್ಷ ಸಾಲ ಒದಗಿಸಿದೆ ಹಾಗೂ 2000-01ನೇ ಸಾಲಿನಲ್ಲಿ ಸೆಪ್ಟೆಂಬರ್ 2000ನೇ ಅಂತ್ಯದವರೆಗೆ 2023 ಫಲಾನುಭವಿಗಳಿಗೆ ರೂ.807.38 ಲಕ್ಷ ಸಾಲ ಒದಗಿಸಿದೆ.

ಕಾರ್ಕಳದಲ್ಲಿ ಕುಡಿಯುವ ನೀರಿನ ಸಮಸ್ಯೆ.

3366(4411) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾರ್ಕಳ ಪುರಸಭೆಯಲ್ಲಿ ಬಲ್ಲಗುಂಡಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆ ಪುರಸಭಾ ಪ್ರವಾಸಿ ಮಂದಿರದ ಬಳಿ ನಿರ್ಮಾಣವಾಗಿರುವ ಹೊಸ ಟ್ಯಾಂಕಿಗೆ ಹೊಸ ಲೈನನ್ನು ಹಾಕುವ ಪ್ರಸ್ತಾವನೆ ಮಂಜೂರಾತಿಯಾಗಿದೆಯೇ?

ಆ) ಹಾಗಿದಲ್ಲಿ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಇಲ್ಲ.

ಆ) ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕಾರ್ಕಳ ನಗರದಲ್ಲಿ ಒಳಚರಂಡಿ ದುರಸ್ತಿ.

3367(4418) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.